# ದ್ವಿತೀಯ ಪಿ.ಯು.ಸಿ. ಮಾದರಿ ಪ್ರಶ್ನೆಪತ್ರಿಕೆ2021–22

ಒಟ್ಟು ಪ್ರಶ್ನೆಗಳು : 72 ವಿಷಯ : ಐಚ್ಛಿಕ ಕನ್ನಡ–16 ಒಟ್ಟು ಮುದ್ರಿತ ಪುಟ : 03

ಸಮಯ : 3 ಗಂಟೆ 15 ನಿಮಿಷ ಒಟ್ಟು ಅಂಕಗಳು : 100

## 'ಅ' ವಿಭಾಗ

### I.ಕೆಳಗಿನ ಪ್ರಶ್ನೆಗಳಿಗೆ ಹತ್ತಕ್ಕೆ ಒಂದು ವಾಕ್ಯದಲ್ಲಿ ಉತ್ತರಿಸಿರಿ : 1X10=10

1. ದೇವೇಂದ್ರ ಏನನ್ನು ಸೃಷ್ಟಿಸಿದನು?
2. ಶಿವ ಅರ್ಜುನನನ್ನು ಪರೀಕ್ಷಿಸಲು ಯಾವ ವೇಷದಲ್ಲಿ ಬಂದನು?
3. ಗುಂಡಯ್ಯನ ಕಾಯಕ ಯಾವುದು?
4. ಪರುಷ ಮುಟ್ಟಲು ಯಾವುದು ಕನಕವಾಗುತ್ತದೆ?
5. ಪರಮ ತತ್ತ್ವಜ್ಞಾನ ಯಾರಿಗೆ ಇಲ್ಲ?
6. ಆಪತ್ತಿನಲ್ಲಿ ಏನು ಇರಬೇಕು?
7. ವಿದ್ಯಾರ್ಥಿಗೆ ಯಾರು ದೈವ?
8. ಅಶನ–ವಸನಗಳು ಹೇಗೆ ಸಿಗುತ್ತವೆ?
9. ಚಂದನ ಕರಗಿಸಲು ಏನಾಗುತ್ತದೆ?
10. ಹೆಣ್ಣನ್ನು ಅಲ್ಲಗಳೆಯುವವರು ಯಾರು?
11. ಚಿಗುರು ಮೀಸೆಯ ರೂಪವಂತ ಯಾರು?
12. ಊರಿಗೆಲ್ಲ ದೊಡ್ಡ ಸಂಭ್ರಮ ಯಾವುದು?
13. ಮಣ್ಣಿನ ಭೋಗಿ ಯಾರು?
14. ಜಲಗಾರ ಯಾವುದನ್ನು ಪರಮ ಪೂಜೆ ಎಂದು ಕರೆಯುತ್ತಾನೆ?
15. ಶಿವನು ಯಾರ ಬಂಧು ಎನ್ನುತ್ತಾನೆ?

## 'ಆ' ವಿಭಾಗ

### II.ಕೆಳಗಿನ ಪ್ರಶ್ನೆಗಳಲ್ಲಿ ನಾಲ್ಕಕ್ಕೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ :2X4=8

16. ಕೋಪಗೊಂಡ ಶಿವನು ಅರ್ಜುನನನ್ನು ತುಳಿದಾಗ ಏನಾಯಿತು?
17. ಗುಂಡಯ್ಯನನ್ನು ಶಿವನು ಹೇಗೆ ಕೊಂಡಾಡಿದನು?
18. ಆನೆ ಹಾಗೂ ಕುರಿಗಳು ಕಬ್ಬನ್ನು ಮೆಲುವ ಪರಿ ಹೇಗೆ?
19. ಮೃದು ನುಡಿಗೆ ಸಮಾನವಾದದು ಯಾವುದೂ ಇಲ್ಲ, ಏಕೆ?
20. ಬಾಳ್ವೆ ಅಮೃತದ ಕೆನೆಯಾಗುವುದು ಯಾವಾಗ?
21. ಇಳಿವಯಸ್ಸಿನ ಹೆಂಡತಿಯನ್ನು ಹೇಗೆ ನೋಡಿಕೊಳ್ಳಬೇಕು?

### III.ಕೆಳಗಿನ ಪ್ರಶ್ನೆಗಳಲ್ಲಿ ಮೂರಕ್ಕೆ ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿರಿ :3X3=9

22. ಸುರಕಾಮಿನಿ ರಂಗದೊಳ್ ಅದೃಶ್ಯಮಪ್ಪುದು.
23. ನಿಮ್ಮುವನಾಡಿಪ ಭಕ್ತನದಾವಂ.
24. ಕಬ್ಬುನವಾದಡೆ ಪರುಷ ಮುಟ್ಟಲು ಕನಕವಹುದು.
25. ಕೇರಿಯೆಲ್ಲವು ಬಳಗ.
26. ಆ ಮನೆಯುನ್ನತಿವಡೆದೊಪ್ಪುವುದು.

### IV.ಕೆಳಗಿನ ಪ್ರಶ್ನೆಗಳಲ್ಲಿ ಮೂರಕ್ಕೆ ವಿವರವಾಗಿ ಉತ್ತರಿಸಿರಿ :4X3=12

27. ಕಿರಾತನೆ ಸಾಕ್ಷಾತ್ ಶಿವನೆಂದಾಗ ಅರ್ಜುನನಲ್ಲಿ ಮೂಡಿದ ಭಾವನೆಗಳು ಯಾವುವು? ವಿವರಿಸಿರಿ.
28. ಗುಂಡಯ್ಯನ ಭಕ್ತಿಗೆ ಮೆಚ್ಚಿ ಶಿವನು ಕುಣಿದ ಬಗೆಯನ್ನು ವರ್ಣಿಸಿ.
29. ವಿಮಳೆ ಒಡ್ಡುವ ತರ್ಕಗಳನ್ನು ಅಲ್ಲಮಪ್ರಭು ಹೇಗೆ ಸಾಧಾರವಾಗಿ ಖಂಡಿಸುತ್ತಾನೆ? ವಿವರಿಸಿರಿ.
30. ಚಿಕ್ಕುಪಾಧ್ಯಾಯನು ಶತಕಗಳಲ್ಲಿ ಬೋಧಿಸಿದ ಬದುಕಿನ ಮೌಲ್ಯಗಳನ್ನು ಸಂಗ್ರಹಿಸಿ ವಿವರಿಸಿರಿ.
31. ಸತಿ–ಪತಿ ಧರ್ಮದ ಬಗ್ಗೆ ಸಂಚಿಯ ಹೊನ್ನಮ್ಮನ ಅಭಿಪ್ರಾಯವೇನು? ವಿವರಿಸಿರಿ.

https://byjus.com

V.ಕೆಳಗಿನ ಒಂದು ಪದ್ಯದ ಭಾವಾರ್ಥವನ್ನು ವಿವರಿಸಿರಿ :4X1=4

32. ಒಕ್ಕುದು ನೆತ್ತರ್ ಬಾಯಿಂ
ಮಿಕ್ಕಲರ್ದುಸಿರಿಡುವ ಮೂಗಿನೆರಡುಂ ಕಡೆಯಿಂ
ದಕ್ಕಟ ತಪ್ಪಾಯ್ತೆನುತಂ
ಮುಕ್ಕಣ್ಣಂ ಮಱುಗಿ ಮನದೆಸಿಡಿಮಿಡಿಗೊಂಡಂ ॥

33. ಮದಕರಿಯೊಳ್‌ದುಷ್ಟನಾರಿಯೊಳ್ ಪಾವಿನೊಳ್
ಪರಿವ ನದಿಯೊಳ್ ಪಾವಕದೊಳು
ನೆರೆ ಗಾವಿಲನೊಳ್ ವಿಶ್ವಾಸವಾವಗಂ
ತರಮಲ್ಲ ಶ್ರೀರಂಗಧಾಮ

## ‘ಇ’ ವಿಭಾಗ

VI.ಕೆಳಗಿನ ಪ್ರಶ್ನೆಗಳಲ್ಲಿ ಎರಡಕ್ಕೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ :2X2=4

34. ಕರುವು ಹೇಗೆ ನಾಚಿಕೊಂಡಿತು?
35. ಸೀರೆಯವನು ಯಾವ ಯಾವ ಬಣ್ಣದ ಸೀರೆಗಳನ್ನು ತಂದಿದ್ದನು?
36. ತಂದೆ–ತಾಯಿ ನಾಗಿಯನ್ನು ಹೇಗೆ ಹುಡುಕಿದರು?

VII.ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿರಿ :3X1=3

37. “ತೇರ ನೋಡಿ ಬರುವ ಬಾರೆ.”
38. “ಅಮ್ಮ ಎಷ್ಟು ಚೆಂದ ಬೆಕ್ಕು ನೋಡೆ ಇಲ್ಲಿ.”
39. ಕಣ್ಣು ಕಣ್ಣಿನಲ್ಲಿ ಕೂಡಿ, ಝಳಪಿಸಿತ್ತು ಮಿಂಚನು!

VIII.ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ವಿವರವಾಗಿ ಉತ್ತರಿಸಿರಿ :4X1=4

40. ನಾಗಿಯ ಕಥೆ ಕವನದಲ್ಲಿಯ ಪ್ರಕೃತಿ ವರ್ಣನೆ ಕುರಿತು ಬರೆಯಿರಿ.
41. ನಾಗಿ ತೇರು ನೋಡಲು ಹೊರಟ ಪ್ರಸಂಗವನ್ನು ವರ್ಣಿಸಿರಿ.
42. ಪ್ರೇಮದ ಆಕರ್ಷಣೆಗೆ ಒಳಗಾದ ನಾಗಿಯದು ದುರಂತ ಕಥೆಯೇ? ಚರ್ಚಿಸಿರಿ.

## ‘ಈ’ ವಿಭಾಗ

IX.ಕೆಳಗಿನ ಪ್ರಶ್ನೆಗಳಲ್ಲಿ ಎರಡಕ್ಕೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ : 2X2=4

43. ಮೂಡಣ ಮತ್ತು ಪಡುವಣದಲ್ಲಿ ಯಾರ್‍ಯಾರಿದ್ದಾರೆ?
44. ಭಾರತಾಂಬೆಯ ದುರ್ಗತಿಗೆ ಕಾರಣಗಳೇನು?
45. ರೈತ ಶಿವನ ಗುಡಿಯಿಂದ ಏನೇನು ತಂದಿದ್ದಾನೆ?
46. ಶಿವಗುಡಿಗೆ ಶಿವನನ್ನು ಸೇರಿಸಬೇಕಾದರೆ ಏನೇನಿರಬೇಕು?

X.ಕೆಳಗಿನ ಪ್ರಶ್ನೆಗಳಲ್ಲಿ ಎರಡಕ್ಕೆ ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿರಿ :3X2=6

47. ದೂರದಲ್ಲಿಯೇ ನಿಂತು ಕೈಮುಗಿದು ಬಾ.
48. ಒಂದು ದಿನವಾದರೂ ವಿಶ್ರಾಂತಿ ಇರಲಿ.
49. ಅಂಜದಿರು, ಸೋದರನೆ ನಾನಿನ್ನ ಬಂಧು!

XI.ಕೆಳಗಿನ ಪ್ರಶ್ನೆಗಳಲ್ಲಿ ಎರಡಕ್ಕೆ ವಿವರವಾಗಿ ಉತ್ತರಿಸಿರಿ :   4X2=8

50. ಭೂದೇವಿಯ ಉಷಃಕಾಲದ ಚಿತ್ರಣವನ್ನು ಚಿತ್ರಿಸಿ.
51. ಶಿವ ಎಲ್ಲಿದ್ದಾನೆ ಎಂದು ಜಲಗಾರ ಹೇಳುತ್ತಾನೆ? ವಿವರಿಸಿರಿ.
52. ಶಿವನ ಆಭರಣಗಳು ಯಾವುವು? ವಿವರವಾಗಿ ಬರೆಯಿರಿ.

XII. ಕೆಳಗಿನ ಎರಡಕ್ಕೆ ಟಿಪ್ಪಣಿ ಬರೆಯಿರಿ :2X2=4

53. ಚಂಪೂ ಸಾಹಿತ್ಯ
54. ಗುಂಡಯ್ಯ
55. ಶತಕ ಸಾಹಿತ್ಯ
56. ಸರ್ವಜ್ಞ

**XIII. ಕೆಳಗಿನವುಗಳಲ್ಲಿ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿರಿ : 6X2=12**

57. ಯಾವುದಾದರೂ ಎರಡು ಪದಗಳ ಅರ್ಥ ಬರೆಯಿರಿ : ಹೇವ, ಪೊಣರ್ಕೆ, ಜವ.

58. ಯಾವುದಾದರೂ ಎರಡು ಪದಗಳ ಸಮಾನಾರ್ಥ ಬರೆಯಿರಿ : ಸೂರ್ಯ, ಜನನಿ,ಇರುಳು.

59. ಯಾವುದಾದರೂ ಎರಡು ನುಡಿಗಟ್ಟುಗಳನ್ನು ವಾಕ್ಯಗಳಲ್ಲಿ ಬಳಸಿರಿ : ದುರ್ಗತಿ, ಮೃದುನುಡಿ, ಹೆಪ್ಪನೆರೆ.

60. ಯಾವುದಾದರೂ ಎರಡು ಪದಗಳ ನಾನಾರ್ಥ ಬರೆಯಿರಿ : ಎಡೆ, ಹೊಳೆ, ಅಲೆ.

61. ಯಾವುದಾದರೂ ಎರಡು ಪದಗಳ ತತ್ಸಮ–ತದ್ಭವಗಳನ್ನು ಬರೆಯಿರಿ : ಬಿತ್ತರ, ವನ,ರಕ್ಕಸ.

62. ಯಾವುದಾದರೂ ಎರಡು ಪದಗಳನ್ನು ಬಿಡಿಸಿ ಬರೆಯಿರಿ : ಹಣ್ಕಾಯಿ, ಅರುಣೋದಯ, ಮೈದೋರು.

63. ಯಾವುದಾದರೂ ಎರಡು ಪದಗಳ ವಿರುದ್ಧಾರ್ಥಕಗಳನ್ನು ಬರೆಯಿರಿ : ಹಿಗ್ಗು, ಇಹ, ಅಸಮಾಧಾನ.

64. ಯಾವುದಾದರೂ ಎರಡು ದ್ವಿರುಕ್ತಿಗಳನ್ನುಬರೆಯಿರಿ.

## 'ಉ' ವಿಭಾಗ

**XIV.ಕೆಳಗೆ ಕೊಟ್ಟಿರುವ ಒಂದಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗಿಸಿ ಛಂದಸ್ಸಿನ ಹೆಸರನ್ನು ಬರೆಯಿರಿ :4X1=4**

65. ಅಂಬರ ಭೂಷಣ ಮಾಲಾ
ಡಂಬರ ದಬೆಡಂ ಗನಮರ ನರ್ತಕಿ ಗಡಮೇ
ನೆಂಬುದೊ ಧರಣೇಂ ದ್ರಂಗಮ
ಚುಂಬಂ ಪೊಗಟಿಲ್ಕೆ ರೂಪು ನೀಳಾಂಜನೆಯಾ

66. ಸರಸಿಜಭವನ ಶಿರಂ ಬೊಬ್ಬಿಡುತಿರೆ
ಸುರರ ಶಿರೋಮಾಲೆಗಳುಲಿವುತ್ತಿರೆ

67. ಲೋಭದಿಂ ಕೌರವನು ಲಾಭವನು ಪಡೆದಿಹನೆ
ನಾಭಿಯಿಂ ಕೆಳಗೆ ಎರಡೂರ ಕೊಂಬಾಗ
ಲಾಭ ಬಂದಿಹುದೆ ಸರ್ವಜ್ಞ

**XV.ಕೆಳಗೆ ಕೊಟ್ಟಿರುವ ಒಂದಕ್ಕೆ ಅಲಂಕಾರ ಹೆಸರಿಸಿ, ಸಮನ್ವಯಿಸಿ ಬರೆಯಿರಿ :4X1=4**

68. ನಾಗಿಯ ಮುಖ ಕಮಲದಂತೆ ಅರಳಿತು.

69. 'ಯುದ್ಧವನ್ನು ನೋಡಲು ದಿನಪನುದಿಸಿಬಂದ'.

70. ಆತ ಉಂಡ ಮನೆಗೆ ಕೇಡು ಬಗೆದ; ಕೃತಘ್ನರು ಏನನ್ನು ತಾನೆ ಮಾಡರು?

**XVI.ಕೆಳಗೆ ಕೊಟ್ಟಿರುವ ಹಳಗನ್ನಡವನ್ನು ಹೊಸಗನ್ನಡಕ್ಕೆ ಅನುವಾದಿಸಿರಿ :4X1=4**

71. ಪರಮಶಿವಾಗಮೋಕ್ತವಿಧಿಯಿಂ ಮಣಲಿಂ ನೆಗೆಟ್ಟೊಂದು ಲಿಂಗಮಂನಿರುಪಮಭಕ್ತಿಯಿಂ ತಿಱಿದು ಪಡ್ಡಳಿ ಬಂದುಗೆ ಕಕ್ಕೆ ಮುತ್ತ ಪಾದರಿಗಳ ಪೂಗಳಂ ಮೃದುಳಬಿಲ್ವದಳಂಗಳನಲ್ಲಿ ತಂದು ಶಂಕರನನೊಱಲ್ದು ಪೂಜಿಸಿದನರ್ಥಿತವೈರಿಜಯಂ ಧನಂಜಯಂ.

72. ವನ್ಯಕಿರಾತನೆಂದು ಬಗೆದೆಚ್ಚೆನಿದಿರ್ಚಿದೆನಜ್ಞಭಾವದಿಂ ಜನ್ಮಮನಾಂತು ನಿಂದು ಮಿಗೆ ಮೆಯ್ವೊಣರ್ದೆಂ ಮದನುಗ್ರಹಾರ್ಥಮೀ ಮಾನ್ಯಮಹೇಶ್ವರಂ ಮಱಿಯೊಳೆಯ್ದಿದುದಂ ತಿಳಿದಾತನಲ್ಲು ಸೌಜನ್ಯವಿದೂರನಾದೆನಕಟೆನ್ನವೊಲಾವನೊ ಗಾಂಪನುರ್ವಿಯೊಳ್.